# ಹ್ಯಾಂಡ್ಸ್ ಟು ಹಾರ್ಟ್ಸ್ ಇಂಟರ್‌ನ್ಯಾಷನಲ್

ಹ್ಯಾಂಡ್ಸ್ ಟು ಹಾರ್ಟ್ಸ್ ಇಂಟರ್‌ನ್ಯಾಷನಲ್ (ಎಚ್‌ಎಚ್‌ಐ) ಎಂಬುದು ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು ಜಗತ್ತಿನಾದ್ಯಂತ ದುರ್ಬಲ ಮಕ್ಕಳ (0–3 ವರ್ಷದ) ಆರೋಗ್ಯ ಮತ್ತು ಬೆಳವಣಿಗೆಯನ್ನು ಕೇಂದ್ರವಾಗಿರಿಸಿ, ತಂದೆತಾಯಿಯರಿಗೆ ಎಳೆಯ ಮಕ್ಕಳ ಬೆಳವಣಿಗೆ (ಇಸಿಡಿ) ಮತ್ತು ಪಾಲನೆ ಪೋಷಣೆ ಕೌಶಲ್ಯಗಳ ಬಗ್ಗೆ ತರಬೇತಿಯನ್ನು ನೀಡುತ್ತಿದೆ.

**ಎಚ್‌ಎಚ್‌ಐ ಏನು ಮಾಡುತ್ತದೆ?**

ಎಚ್‌ಎಚ್‌ಐಯು ಸರಳವಾದ, ಹೊಂದಿಕೊಳ್ಳಬಹುದಾದ, ಕಡಿಮೆ ವೆಚ್ಚದ ಮತ್ತು ಆಯಾ ಸಂಸ್ಕೃತಿಗೆ ಸುಸಂಬಂಧಿತವಾದ ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತದೆ. ಈ ತರಬೇತಿಯು ಮಹಿಳೆಯರಿಗೆ/ಪೋಷಕರಿಗೆ ತಮ್ಮ ಮಕ್ಕಳ ಭಾಷೆ, ಸಾಮಾಜಿಕ ಅರಿವು, ಗ್ರಹಣ ಶಕ್ತಿ ಮತ್ತು ದೈಹಿಕ ಬೆಳವಣಿಗೆಗಳನ್ನು ಉತ್ತಮಗೊಳಿಸುವ ಸಾಮರ್ಥ್ಯವನ್ನು ನೀಡುತ್ತದೆ ಹಾಗೂ ಅವರ ಆರೋಗ್ಯ ಮತ್ತು ಪೌಷ್ಟಿಕಾಹಾರದ ತಿಳವಳಿಕೆಗೆ ಉತ್ತಮ ನೆರವನ್ನು ನೀಡುತ್ತದೆ. ಅಲ್ಲದೇ ಇದು ಬಾಂಧವ್ಯಗಳನ್ನು ಬೆಳೆಸುತ್ತದೆ, ಭವಿಷ್ಯದ ಎಲ್ಲಾ ಸಂಬಂಧಗಳಿಗೆ ಅಗತ್ಯವಿರುವ ಬುನಾದಿಯನ್ನು ಮತ್ತು ಆರೋಗ್ಯಕರ ಸಮಾಜದ ಚೌಕಟ್ಟನ್ನು ಸ್ಥಾಪಿಸುತ್ತದೆ. ಪುಟಾಣಿ ಮಕ್ಕಳ ಬೆಳವಣಿಗೆ ಕುರಿತು ಗುಣಮಟ್ಟದ ಮಾಹಿತಿಯನ್ನು ನೀಡುವುದು ಮತ್ತು ಇದಕ್ಕೂ ಸಂಸ್ಕೃತಿ ನಿರ್ದಿಷ್ಟ ಸಾಧನ, ಸಂಪ್ರದಾಯಗಳು ಮತ್ತು ಆಚರಣೆಗಳಿಗೆ ಸಂಬಂಧ ಕಲ್ಪಿಸುವುದರಿಂದ ಎಚ್‌ಎಚ್‌ಐ ಮಾಹಿತಿಗಳು ಎಲ್ಲಿಯಾದರೂ ಅನ್ವಯವಾಗುತ್ತವೆ, ಮತ್ತು ಸಂಪನ್ಮೂಲ ಅಥವಾ ಸಾಕ್ಷರತೆ ಇರಲಿ ಇಲ್ಲದೇ ಇರಲಿ ಅರ್ಥಪೂರ್ಣವಾಗಿರುತ್ತವೆ.



**ಭಾರತದಲ್ಲಿ ಎಚ್‌ಎಚ್‌ಐ ಯ ಇತಿಹಾಸ**

ಎಚ್‌ಎಚ್‌ಐ ಯು 2006 ರಲ್ಲಿ ದಕ್ಷಿಣ ಭಾರತದಲ್ಲಿ ಅನಾಥಾಶ್ರಮಗಳ ಸಹಭಾಗಿತ್ವದೊಂದಿಗೆ ಕಾರ್ಯ ನಿರ್ವಹಿಸಲು ಆರಂಭಿಸಿತು. ಒಂದು ವರ್ಷದೊಳಗೆ ಭಾರತದ ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು (ಐಸಿಡಿಎಸ್) ಅಂಗನವಾಡಿ ಕಾರ್ಯಕರ್ತರನ್ನು ಮತ್ತು ಸಹಾಯಕರನ್ನು ಅಲ್ಲಿಗೆ ಕಳುಹಿಸಲು ಆರಂಭಿಸಿತು. ಇಲ್ಲಿಯವರೆಗೆ ಅಂದಾಜು 4,000 ಕಾರ್ಯಕರ್ತರು ಎಚ್‌ಎಚ್‌ಐ ನಲ್ಲಿ ಪುಟಾಣಿ ಮಕ್ಕಳ ಬೆಳವಣಿಗೆ ಬಗ್ಗೆ ತರಬೇತಿಯನ್ನು ಪಡೆದಿದ್ದಾರೆ.

ಎಚ್‌ಎಚ್‌ಐ ನ ಮುಖ್ಯ ಕಾರ್ಯನಿರ್ವಹಣಾ ಭಾಗಿದಾರವಾಗಿರುವ ವಿಶ್ವ ಯುವ ಕೇಂದ್ರವು, ಒಂದು ಸಮುದಾಯ ಅಭಿವೃದ್ಧಿ ಸಂಸ್ಥೆಯಾಗಿದ್ದು ಒಡಿಶಾದಲ್ಲಿ ನೆಲೆಯಾಗಿದೆ. ಇದು ಪ್ರಾಥಮಿಕವಾಗಿ ಬಡ ಗ್ರಾಮೀಣ ಜನರೊಂದಿಗೆ ಕೆಲಸ ಮಾಡುತ್ತದೆ.

2012ರಲ್ಲಿ ಭಾರತದ ಮಕ್ಕಳನ್ನು ರಕ್ಷಿಸಿ ಅಭಿಯಾನವು ಎಚ್‌ಎಚ್‌ಐ ಜೊತೆಗೆ 0–3 ವರ್ಷದ ಮಕ್ಕಳಿಗಾಗಿ ಆಂಧ್ರಪ್ರದೇಶದಲ್ಲಿ ಮೊದಲ ಬಾರಿಗೆ ತನ್ನ ವಿಧಾನವನ್ನು ಪ್ರಯೋಗಿಸಲು, ಕರಾರು ಮಾಡಿಕೊಂಡಿತು. ಎಚ್‌ಎಚ್‌ಐ ಯು, ಮಕ್ಕಳನ್ನು ರಕ್ಷಿಸಿ ಕಾರ್ಯಕ್ರಮದಲ್ಲಿ 17 ನಿಪುಣ ತರಬೇತುದಾರರಿಗೆ ತರಬೇತಿ ನೀಡಿತು. ತರುವಾಯ ಈ ನಿಪುಣ ತರಬೇತುದಾರರು ಸುಮಾರು 292 ಐಸಿಡಿಎಸ್ ಕಾರ್ಯಕರ್ತರು ಮತ್ತು 6,700 ತಾಯಂದಿರಿಗೆ ತರಬೇತಿ ನೀಡಿದರು, ಇದರಿಂದ 10,000 ಕ್ಕಿಂತ ಹೆಚ್ಚಿನ ಬಡ ಶಿಶುಗಳಿಗೆ ಸಾಕಷ್ಟು ಪ್ರಯೋಜನವಾಗಿದೆ.

ಈ ಬಗೆಯ, ವಿವಿಧ ಸಹಭಾಗಿತ್ವದ ಮೂಲಕ ಭಾರತದಲ್ಲಿ ಸುಮಾರು 22,000 ಪೋಷಕರು (ಆಶಾ, ಸ್ವಯಂ ನೆರವಿನ ಗುಂಪುಗಳು, ಅನಾಥಾಶ್ರಮದ ಪಾಲನಾ ವರ್ಗದವರು, ಕ್ರೇಷ್ ಕಾರ್ಯಕರ್ತರು, ಐಸಿಡಿಎಸ್ ಸಿಬ್ಬಂದಿ ವರ್ಗದವರು, ಮತ್ತು ತಾಯಂದಿರು) ತಮಿಳುನಾಡು, ಕೇರಳ, ಒಡಿಶಾ, ದೆಹಲಿ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ನಡೆದ ಎಚ್‌ಎಚ್‌ಐ ನ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಎಚ್‌ಎಚ್‌ಐ ತರಬೇತಿಯ ಪ್ರಯೋಜನಗಳು**

**ಮಕ್ಕಳಿಗಾಗಿ**

- ಕಾಯಿಲೆ ಮತ್ತು ಮಾನಸಿಕ ಒತ್ತಡಗಳ ಪ್ರಮಾಣ ಕಡಿಮೆಯಾಗಿವೆ.
- ಮಕ್ಕಳ ತೂಕ ಮತ್ತು ಪೌಷ್ಟಿಕತೆಯ ಸ್ಥಿತಿ ಉತ್ತಮಗೊಂಡಿವೆ.
- ಪೋಷಕರೊಂದಿಗೆ ಉತ್ತಮ ಬಾಂಧವ್ಯ ಏರ್ಪಟ್ಟಿವೆ.

* ಆರೋಗ್ಯ ಮತ್ತು ಸರ್ವಾಂಗೀಣ ಬೆಳವಣಿಗೆಯು ಉತ್ತಮಗೊಂಡಿವೆ.



**ಮಹಿಳೆಯರಿಗೆ ಮತ್ತು ಪೋಷಕರಿಗಾಗಿ**

* ಪುಟಾಣಿ ಮಕ್ಕಳ ಬೆಳವಣಿಗೆಯಲ್ಲಿ ಶೇ. 35 ರಿಂದ ಶೇ.40 ರವರೆಗೆ ಜ್ಞಾನ ಸಿಗುತ್ತದೆ.
* ಉಗಾಂಡದಲ್ಲಿ ತಮ್ಮ ಮಕ್ಕಳಿಗೆ ಭಾಷೆಗಳನ್ನು ಕಲಿಸುವ ತಾಯಂದಿರ ಸಾಮರ್ಥ್ಯ ಶೇ. 193 ರಷ್ಟು ಹೆಚ್ಚಿದೆ.
* ತಮ್ಮ ಮಗುವಿಗೆ ಆಹಾರ ಉಣಿಸುವಾಗ ಮತ್ತು ಆಟವಾಡುವ ಸಮಯದಲ್ಲಿ ಪರಸ್ಪರ ಸಂಭಾಷಣೆ ನಡೆಸುವ ಕಾಲದಲ್ಲಿ ವಿಷಯ ಗ್ರಹಣೆ ಬಗ್ಗೆ ಪ್ರಚೋದನೆ ಒದಗಿಸುವುದು ಶೇ. 100 ರಷ್ಟು ಹೆಚ್ಚಳಗೊಂಡಿದೆ.
* ಮಕ್ಕಳಿಗೆ ಶಿಕ್ಷೆ ವಿಧಿಸವುದರ ಮತ್ತು ಮಾನಸಿಕ ಒತ್ತಡದ ಪ್ರಮಾಣ ಕಡಿಮೆಯಾಗಿವೆ.
* ಪೌಷ್ಟಿಕ ಆಹಾರ ಯೋಜನೆ ಮತ್ತು ಆಹಾರ ಉಣಿಸುವ ಅಭ್ಯಾಸಗಳು ಸಾಕಷ್ಟು ಸುಧಾರಿಸಿವೆ.

**ಸಮುದಾಯಗಳಿಗಾಗಿ**

* ಮಹಿಳೆಯರು ಮತ್ತು ಸಮುದಾಯದ ಸದಸ್ಯರನ್ನು ಸಬಲೀಕರಣಗೊಳಿಸಿದೆ
* ದೀರ್ಘಕಾಲೀನ ಸಾಮಾಜಿಕ ವೆಚ್ಚವನ್ನು ಕಡಿಮೆಗೊಳಿಸಿದೆ
* ಸಾಮಾಜಿಕ ಒಗ್ಗಟ್ಟನ್ನು ಸುಧಾರಿಸಿದೆ
* ಸಮುದಾಯದಲ್ಲಿ ಮಕ್ಕಳ ಸ್ನೇಹಿ ಒಡನಾಟಗಳು ಹೆಚ್ಚಿವೆ.

**ಸಹಭಾಗಿತ್ವದೊಂದಿಗೆ ಎಚ್‌ಎಚ್‌ಐ ಕಾರ್ಯ ನಿರ್ವಹಣೆ**

ಎಚ್‌ಎಚ್‌ಐ ಯ ಮಾದರಿಯು, ತಮ್ಮ ಸಹಭಾಗಿಗಳ ಮತ್ತು ತಾವು ಸೇವೆ ಸಲ್ಲಿಸುತ್ತಿರುವ ಸಮುದಾಯಗಳ ಅವಶ್ಯಕತೆಗಳಿಗೆ ಮತ್ತು ವಾಸ್ತವ ಸ್ಥಿತಿಗೆ, ಅತ್ಯಂತ ಹೊಂದಿಕೊಳ್ಳುವ ಮತ್ತು ಬಾಗುವ ಗುಣಗಳನ್ನು ಹೊಂದಿದೆ. ತರಬೇತುದಾರರಿಗೆ ತರಬೇತಿ (ಟಿಒಟಿ) ಮಾದರಿಯ ಬಳಕೆಯಿಂದ, ಅನುಪಾಲನಾ ನೆರವಿನೊಂದಿಗೆ ಎಚ್‌ಎಚ್‌ಐ ಕಾರ್ಯಕ್ರಮವು, ಅತ್ಯಂತ ಅನುಕರಣೀಯವಾಗಿದೆ. ಬಡ ಮಕ್ಕಳಿಗಾಗಿ ಪುಟ್ಟ ಮಕ್ಕಳ ಬೆಳವಣಿಗೆ ಯ ಅರಿವನ್ನು ಉತ್ತಮಗೊಳಸಲು ತಮ್ಮ ಸಹಭಾಗಿಗಳ ಮತ್ತು ಪೋಷಕರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

**ಎಚ್‌ಎಚ್‌ಐ ನ ಕೆಲಸಗಳಿಗಿರುವ ಮಾನ್ಯತೆ**

* ಎಳೆಯ ಮಕ್ಕಳ ಏಷ್ಯಾ ಪ್ರಾದೇಶಿಕ ಜಾಲವು, ಒಡಿಶಾದಲ್ಲಿ ಎಚ್‌ಎಚ್‌ಐ ನ ಕಾರ್ಯವನ್ನು ಒಂದು ಭರವಸೆಯ ಪ್ರಯತ್ನವೆಂದು ಸಂಶೋಧನೆ ನಡೆಸಿದೆ. ಈ ಸಂಶೋಧನೆಯ ವರದಿಯು 2011 ರಲ್ಲಿ ಅರ್ನೆಕ್ ರಿಪೋರ್ಟ್(ARNEC report)ನಲ್ಲಿ ಪ್ರಕಟವಾಗಿದೆ.
* ಫ್ಲೆಚ್ಚರ್ ಸಂಸ್ಥೆ ಯು ಹಣಕಾಸು ನೆರವು ನೀಡುತ್ತಿರುವ ಎಚ್‌ಎಚ್‌ಐ ನ ಕಾರ್ಯಕ್ರಮಗಳ ಮೌಲ್ಯಮಾಪನ ಒಡಿಶಾದಲ್ಲಿ ನಡೆಯುತ್ತಿದೆ.
* 2011-2013ರಲ್ಲಿ ಪುಟ್ಟ ಮಕ್ಕಳ ಆರೈಕೆಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಯುನೇಸ್ಕೊ (UNESCO Asia) ಗೆ ಸಲಹೆಗಾರ ಸಂಸ್ಥೆಯಾಗಿತ್ತು.

